# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್.ರಸ್ತೆ, ತುಮಕೂರು - 572 103

ಸಂಖ್ಯೆ:ತುವಿ:ಶೈವಿ:2023-24:/3149 ದಿನಾಂಕ:06.05.2023

## ಸುತ್ತೋಲೆ

ವಿಷಯ: ಎರಡನೇ ಮತ್ತು ನಾಲ್ಕನೇ ಸೆಮಿಸ್ಟರ್‌ನ ವಿವಿಧ ಸ್ನಾತಕ ಪದವಿಗಳಲ್ಲಿ **Value Based Skill Enhancement Courses** ಪತ್ರಿಕೆಗಳನ್ನು ಹಾಗೂ ಮುಕ್ತ ಆಯ್ಕೆ ಪತ್ರಿಕೆಗಳನ್ನು ಆಯ್ಕೆ ಮಾಡಿಕೊಳ್ಳುವ ಕುರಿತು

ಉಲ್ಲೇಖ: 1) ಈ ಕಚೇರಿ ಸುತ್ತೋಲೆ ಸಂಖ್ಯೆ:ತುವಿ:ಶೈವಿ:2022-23:4050 ದಿನಾಂಕ:23.11.2022
2) ಈ ಕಚೇರಿ ಸುತ್ತೋಲೆ ಸಂಖ್ಯೆ:ತುವಿ:ಶೈವಿ:2022-23:5140 ದಿನಾಂಕ:09.02.2023
3) ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:06.05.2023

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(2)ರ ಸುತ್ತೋಲೆಯನ್ವಯ ಈಗಾಗಲೇ ಸ್ನಾತಕ ಪದವಿಗಳ ಮೂರನೇ ಸೆಮಿಸ್ಟರ್‌ನಲ್ಲಿ Value Based Skill Enhancement Courses ಪತ್ರಿಕೆಗಳನ್ನು ಆಯ್ಕೆ ಮಾಡಿಕೊಳ್ಳಲು ಸೂಚಿಸಲಾಗಿದ್ದು, ಪ್ರಸ್ತುತ, ಎರಡು ಮತ್ತು ನಾಲ್ಕನೇ ಸೆಮಿಸ್ಟರ್‌ಗಳಲ್ಲಿಯೂ ಸಹ Value Based Skill Enhancement Courses ಗಳನ್ನು ಆಯ್ಕೆ ಮಾಡಿಕೊಳ್ಳುವಂತೆ ಸೂಚಿಸಲಾಗಿದೆ. ಹೀಗೆ ಉಲ್ಲೇಖ(2)ರ ಕ್ರಮ ಸಂಖ್ಯೆ 3ರಲ್ಲಿರುವ Value Based Skill Enhancement Courses (Internet Literacy, Design Thinking, Maxims of Conversation, Logical Reasoning and Problem Solving, Media Literacy ಮತ್ತು ಕನ್ನಡ ಕೌಶಲ್ಯ) ಪತ್ರಿಕೆಗಳನ್ನು ಆಯ್ಕೆ ಮಾಡಿಕೊಳ್ಳುವಾಗ ಒಂದೇ ಪತ್ರಿಕೆಯು ಬೇರೆ ಸೆಮಿಸ್ಟರ್‌ಗಳಲ್ಲಿ ಪುನರಾವರ್ತನೆ ಆಗದಂತೆ ಎಚ್ಚರವಹಿಸಿ ವಿದ್ಯಾರ್ಥಿಗಳ ಕೋರ್ಸ್ ರಿಜಿಸ್ಟ್ರೇಷನ್ ಮಾಡಿಸಲು ತಿಳಿಸಿದೆ. ಆದರೆ, ದೈಹಿಕ ಶಿಕ್ಷಣ, ಎನ್.ಎಸ್.ಎಸ್, ಎನ್.ಸಿ.ಸಿ, ರೋವರ್ಸ್ ಅಂಡ್ ರೇಂಜರ್ಸ್ ವಿಷಯಗಳಿಗೆ ಒಂದರಿಂದ ನಾಲ್ಕನೇ ಸೆಮಿಸ್ಟರ್‌ವರೆಗೆ ಪ್ರತ್ಯೇಕ ಪಠ್ಯಕ್ರಮವಿರುವುದರಿಂದ ಈ ಪತ್ರಿಕೆಗಳನ್ನು ಪುನರಾವರ್ತಿಸಿಕೊಳ್ಳಬಹುದಾಗಿದೆ.

ಮುಂದುವರೆದು, ಉಲ್ಲೇಖ(1)ರ ಸುತ್ತೋಲೆಯನ್ವಯ ಸ್ನಾತಕ ಪದವಿಗಳಲ್ಲಿ ಕಡ್ಡಾಯವಾಗಿ ಅಂತರ್‌ಶಿಸ್ತೀಯ ಮುಕ್ತ ಆಯ್ಕೆ ಪತ್ರಿಕೆಗಳನ್ನು ಆಯ್ಕೆ ಮಾಡಿಕೊಳ್ಳುವ ಸಂಬಂಧ ಯುಯುಸಿಎಂಎಸ್‌ನಲ್ಲಿ ಅಳಡವಡಿಸಲಾಗಿತ್ತು. ವಿವಿಧ ಸ್ನಾತಕ ಪದವಿಗಳ ಎರಡನೇ ಸೆಮಿಸ್ಟರ್‌ನಲ್ಲೂ ವಿದ್ಯಾರ್ಥಿಗಳು ಅಂತರ್‌ಶಿಸ್ತೀಯ ಮುಕ್ತ ಆಯ್ಕೆ ಪತ್ರಿಕೆಗಳನ್ನು ಆಯ್ಕೆ ಮಾಡಿಕೊಳ್ಳಬೇಕೆಂದು ತಿಳಿಸಲಾಗಿದೆ.

ಆದೇಶದ ಮೇರೆಗೆ,

Mangalahowri H

ಉಪಕುಲಸಚಿವರು
ಶೈಕ್ಷಣಿಕ ವಿಭಾಗ
ತುಮಕೂರು ವಿಶ್ವವಿದ್ಯಾನಿಲಯ,
ತುಮಕೂರು

ಗೆ,

ಘಟಕ ಹಾಗೂ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು

ಪ್ರತಿಗಳು:

1. ಕುಲಸಚಿವರು (ಮೌಲ್ಯಮಾಪನ), ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
2. ಸಿಸ್ಟಂ ಅನಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು – ಎಲ್ಲಾ ಕಾಲೇಜುಗಳಿಗೆ ಇ-ಮೇಲ್ ಕಳುಹಿಸಲು ಹಾಗೂ ಜಾಲತಾಣದಲ್ಲಿ ಪ್ರಕಟಿಸುವುದು.
3. ಮಾನ್ಯ ಕುಲಪತಿಯವರ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
4. ಮಾನ್ಯ ಕುಲಸಚಿವರ ಆಪ್ತ ಸಹಾಯಕರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
5. ಕಚೇರಿ ಪ್ರತಿ.